ಮೊದಲನೆಯ ಕಳ್ಳ: ಪೊಲೀಸರು ಬರುತ್ತಿದ್ದಾರೆ. ಬೇಗ ದುಮುಕು.
ಎರಡನೆಯ ಕಳ್ಳ: ಇದು ಹದಿಮೂರನೇ ಮಹಡಿ.
ಮೊದಲನೆಯ ಕಳ್ಳ: ಮೂಢನಂಬಿಕೆಯನ್ನು ಬಿಡು! ಹದಿಮೂರು ಅಪಶಕುನದ ಸಂಖ್ಯೆಯಲ್ಲ.

★★★

ಗುಂಡ: ನಿನ್ನ ದೃಷ್ಟಿಯಲ್ಲಿ ಯಾರು ಒಳ್ಳೆಯವರು?
ಗೆಳೆಯ: ಕೇಳಿದ ಕೂಡಲೇ ಸಹಾಯ ಮಾಡುವವರು
ಗುಂಡ: ಹಾಗಾದರೆ ಐದು ಸಾವಿರ ಕೊಟ್ಟು ಸಹಾಯ ಮಾಡು ಪ್ಲೀಸ್.

★★★

ಗುಂಡ: ಲೇ ಹಸುವಿನ ಮೇಲೆ ಸಾಲ ತಗೊಂಡಿದೀಯಲ್ಲ ಹೇಗೆ ಕಟ್ತೀಯಾ?
ಹೆಂಡತಿ: ಹಗ್ಗದಿಂದ ಕಟ್ತೀನಿ

★★★

ಟೀಚರ್: ತಿಮ್ಮ ಪಾತ್ರೆ ತೊಳೆಯಬೇಕು ಮತ್ತು ತಿಮ್ಮ ಪಾತ್ರೆ ತೊಳೆಯಲೇಬೇಕು. ಇವೆರಡು ವಾಕ್ಯದಲ್ಲಿನ ವ್ಯತ್ಯಾಸ ಹೇಳು.
ಗುಂಡ: ಮೊದಲ ವಾಕ್ಯ ತಿಮ್ಮ ಮದುವೆಯಾಗಿಲ್ಲ ಎಂಬುದನ್ನು ತಿಳಿಸಿದೆ. ಎರಡನೇ ವಾಕ್ಯ ಅವನು ಗ್ಯಾರಂಟಿ ಮದುವೆಯಾಗಿದ್ದೇನೆ ಎಂಬುದನ್ನು ತಿಳಿಸುತ್ತದೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**



ಗುಂಡನಿಗೆ ಜೀವನದಲ್ಲಿ ನೆಮ್ಮದಿ ಇರಲಿಲ್ಲ. ಅವನ ಆದಾಯ ಹಾಗೂ ಖರ್ಚುಗಳು ಹೊಂದಾಣಿಕೆ ಆಗುತ್ತಾ ಇರಲಿಲ್ಲ. ಸದಾ ಸಾಲದಿಂದ ಮನಃಶಾಂತಿ ಹಾಳಾಗಿತ್ತು. ಒಮ್ಮೆ ಅವನು ಒಬ್ಬ ಸನ್ಯಾಸಿಯ ಕಡೆಗೆ ಹೋಗಿ ಏನಾದರೂ ಪರಿಹಾರ ಸೂಚಿಸಿ ಎಂದು ಕೇಳಿದ.
ಸನ್ಯಾಸಿ: ನಿನಗೆ ಮನಃಶಾಂತಿ ದೊರೆಯಬೇಕಾದರೆ ನೀನು ಯಾವ ಕೆಲಸ ಮಾಡುತ್ತೀಯೋ ಅದರಲ್ಲಿ ಸಂಪೂರ್ಣವಾಗಿ ನಿನ್ನನ್ನು ಮುಳುಗಿಸಿಕೊಂಡು ಬಿಡು.
ಗುಂಡ: (ಬೇಸರದಿಂದ) ನಾನು ಬಾವಿ ತೋಡುತ್ತೇನೆ.

ಹಿತ ವಚನ:
ಗಂಡಸರು ಯಾವಾಗಲೂ ಮೌನವಾಗಿ ಪ್ರಾರ್ಥಿಸಬೇಕೆಂದರೆ ಅವರು ಸಲ್ಲಿಸುವ ಪ್ರಾರ್ಥನೆ ದೇವರಿಗೆ ಕೇಳಿಸಬೇಕು ಮತ್ತು ಹೆಂಡತಿಗೆ ಕೇಳಿಸಬಾರದು.

**(ಸಂಗ್ರಹ) ಸಾವಿತ್ರಮ್ಮ ಕೆ. ವಿಭೂತಿ ಹರಿಹರ**

ಹಾರಾಟದಲ್ಲಿದ್ದ ವಿಮಾನದ ಎರಡೂ ಎಂಜಿನ್‌ಗಳಲ್ಲಿ ತೊಂದರೆ ಕಾಣಿಸಿಕೊಂಡಿತು.
ಪೈಲಟ್ ಪ್ರಯಾಣಿಕರಲ್ಲಿ ಕೇಳಿದರು. ಯಾರಿಗಾದರೂ ಆಯುಷ್ಯ ವೃದ್ಧಿಯ ಸಲುವಾಗಿ ಪ್ರಾರ್ಥನೆ ಸಲ್ಲಿಸಲು ತಿಳಿದಿದೆಯೇ?
ಓರ್ವ ಬಾಬಾ ಹೆಮ್ಮೆಯಿಂದೆದ್ದು ಹೇಳಿದರು, 'ನನಗೆ ಗೊತ್ತಿದೆ'
ಪೈಲಟ್: ಸರಿ ಹಾಗಾದರೆ, ನೀವು ನಿಮ್ಮ ಆಯುಷ್ಯಕ್ಕಾಗಿ ಪ್ರಾರ್ಥಿಸಿ. ಒಂದು ಪ್ಯಾರಾಚೂಟ್ ಕಡಿಮೆಯಿದೆ!

★★★

ಕೆಜಿ ಓದುತ್ತಿರುವ ಗುಂಡನ ಮಗ ಶಾಲೆಗೆ ಹೋಗುವಾಗ ಅಳುತ್ತಿದ್ದ....
ಗುಂಡ: ನೀನು ಸಿಂಹದ ಮರಿ ಕಣೋ... ಸಿಂಹದ ಮರಿ ಎಲ್ಲಿಯಾದರೂ ಅಳುತ್ತದೆಯೆ?
ಗುಂಡನ ಮಗ: ಮತ್ತೆ... ಸಿಂಹದ ಮರಿ ಎಲ್ಲಿಯಾದರೂ ಶಾಲೆಗೆ ಹೋಗುತ್ತದೆಯೆ?!

★★★



ಗುಂಡನ ಪತ್ನಿ: (ನಸು ನಾಚುತ್ತಾ) ರೀ... ಪಕ್ಕದ ಮನೆಗೆ ಹೊಸದಾಗಿ ಬಾಡಿಗೆಗೆ ಬಂದಿರುವವರು ತುಂಬಾ ರಸಿಕರು.... ಪ್ರತಿ ದಿನ ಅವರು ಪತ್ನಿಗೆ ಕಿಸ್ ಕೊಟ್ಟೇ ಡ್ಯೂಟಿಗೆ ಹೊರಡ್ತಾರೆ ಕಣ್ರೀ... ನೀವೂ ಹಾಗೆ ಮಾಡ್ಬಹುದು ತಾನೆ?
ಗುಂಡ: ನಾನು ಹಾಗೆ ಹೇಗೆ ಮಾಡಲಿ? ನನಗಾಕೆಯ ಪರಿಚಯವೂ ಇಲ್ಲ!

★★★

ಮನೆ ಕೆಲಸದಾಕೆ ಎರಡೇ ಕಾರಣಗಳಿಗಾಗಿ ಕೆಲಸ ಬಿಡುತ್ತಾಳೆ....
1. ಮನೆಯ ಯಜಮಾನಿ ತುಂಬಾ ಖಡಕ್.
2. ಮನೆಯ ಯಜಮಾನ ತುಂಬಾ ರಸಿಕ!

★★★

ಪತಿ: ಇವತ್ತಿನ ಅಡುಗೆ ನಿನ್ನಮ್ಮ ಮಾಡಿರುವರೆ?
ಪತ್ನಿ: ಹೌದು, ನಿಮಗೆ ಹೇಗೆ ತಿಳಿಯಿತು?
ಪತಿ: ಪ್ರತಿ ದಿನ ಊಟದಲ್ಲಿ ಕಪ್ಪು ಕೂದಲು ಸಿಗುತ್ತಿತ್ತು. ಇವತ್ತು ಬಿಳಿ ಕೂದಲು ಸಿಕ್ಕಿತು ಕಣೆ!

★★★

ಪತಿ: ಮದುವೆಯ ಹತ್ತನೇ ವಾರ್ಷಿಕೋತ್ಸವಕ್ಕೆ ನಾನು ನಿನ್ನನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಕರೆದೊಯ್ಯುತ್ತೇನೆ.
ಪತ್ನಿ: ಮತ್ತೆ ಇಪ್ಪತ್ತೈದನೇ ವಾರ್ಷಿಕೋತ್ಸವಕ್ಕೆ...?
ಪತಿ: ಅಲ್ಲಿಂದ ಮರಳಿ ಕರೆತರಲು ಬರುತ್ತೇನೆ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**